ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,
ಹುಣಸೂರು

**ಸಿ.ಸಿ. 19/2018**

ಸಿ.ಡಬ್ಲೂ-**8** ಪಿ.ಡಬ್ಲೂ **-6**

ದಿಃ **02.02.2024** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ಮಲ್ಲೇಶ |
| ಗಂಡ/ತಂದೆಯ ಹೆಸರು | ಜವರೇಗೌಡ |
| ವಯಸ್ಸು | ಸುಮಾರು 47 ವರ್ಷ |
| ಕೆಲಸ | ವ್ಯವಸಾಯ |
| ವಾಸಸ್ಥಳ | ಮೈಲಾಂಬೂರು ಗ್ರಾಮ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಸಾಕ್ಷಿಗೆ ನಿಪಿ-2 ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ದಿಃ 11.11.2017 ರಂದು ಪೊಲೀಸರು ಬೆಳಿಗ್ಗೆ 11.00 ಗಂಟೆಗೆ ಮೈಲಾಂಬೂರಿನ ಚಾಸಾ-2 ರವರ ಮನೆಯ ಬಳಿ ಬಂದಿದ್ದು, ಪೊಲೀಸರು ಚಾಸಾ-2 ಹಾಗೂ ಆರೋಪಿತರು ಹೊಡೆದಾಟ ಮಾಡಿಕೊಂಡಿದ್ದಾರೆ, ಸಹಿ ಹಾಕುವಂತೆ ಹೇಳಿ ಸಹಿ ಮಾಡಿಸಿಕೊಂಡಿದ್ದರು. ನಿಪಿ-2 ರಲ್ಲಿ ಏನು ಬರೆದಿದೆ ಎಂದು ಓದಿಲ್ಲ. ಚಾಸಾ-2 ರವರು ಎರಡು ದೊಣ್ಣೆಗಳನ್ನು ಪೊಲೀಸರಿಗೆ ತಂದು ಕೊಟ್ಟಿರುತ್ತಾರೆ. ಮು,ಮಾ-1 ಮತ್ತು 2 ನ್ನೇ ನಿಪಿ-2 ರಂತೆ ಪೊಲೀಸರ ಸಮಕ್ಷಮ ಹಾಜರುಪಡಿಸಿದ ದೊಣ್ಣೆಗಳಾಗಿರುತ್ತವೆ.

(ಈ ಹಂತದಲ್ಲಿ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷಿಯಾಗಿರುವುದರಿಂದ ಸ. ಸ. ಅ ರವರ ಪಾಟೀಸವಾಲಿಗಾಗಿ ಅನುಮತಿಯನ್ನು ಕೋರಿದ್ದು, ಆಲಿಸಿ ಅನುಮತಿಸಲಾಯಿತು.)

<u>ಪಾಟೀಸವಾಲು ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

ಪೊಲೀಸರು ಸ್ಥಳ ಮಹಜರ್ ಗೆ ಬಂದಾಗ ನಿಮ್ಮಿಂದ ನಿಪಿ-2 ಕ್ಕೆ ಸಹಿ ಪಡೆದಿರುತ್ತಾರೆಂದರೆ ಸರಿ.

<u>ಪಾಟೀ ಸವಾಲು ಆರೋಪಿ ಪರ ವಕೀಲರು ಶ್ರೀ ಎಸ್.ಪಿ. ವಕೀಲರಿಂದಃ</u>

ಮಹಜರ್ ಗೆ ಬರಲು ಪೊಲೀಸರು ನಿಮಗೆ ಲಿಖಿತ ನೋಟೀಸ್ ನೀಡಿದ್ದರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಮಹಜರ್ ಗೆ ಬರಲು ನಿಮಗೆ ಯಾರು ತಿಳಿಸಿದ್ದರು ಎಂದರೆ ಸಾಕ್ಷಿ ಜಮೀನಿನಿಂದ ಊರಿನೊಳಗೆ ಬರುತ್ತಿದ್ದಾಗ, ಪೊಲೀಸರು ಮಹಜರ್ ಗೆ ಬಂದಿರುವುದಾಗಿ ಹೇಳಿ ಚಾಸಾ-2 ರವರ ಮನೆಯ ಬಳಿ ಸಹಿ ಹಾಕಿಸಿಕೊಂಡಿರುತ್ತಾರೆ. ಪೊಲೀಸರು ಮಹಜರ್ ನ್ನು ಬರೆದು ಮುಗಿಸಿದ್ದು, ನಂತರ ನಿಮಗೆ ಸಹಿ ಹಾಕುವಂತೆ ಹೇಳಿದ್ದರು ಎಂದರೆ ಸರಿ. ನಿಪಿ-2 ರಲ್ಲಿ ಬರೆದಿರುವ ವಿಚಾರ ನಿಮಗೆ ಗೊತ್ತಿಲ್ಲ ಎಂದರೆ ಸರಿ.

ಚಾಸಾ-1 ರವರು ತಮ್ಮ ಮನೆಯಿಂದ ಮು.ಮಾ-1 ಮತ್ತು 2 ನ್ನು ತಂದು ಕೊಟ್ಟಿರುತ್ತಾರೆಂದರೆ ಸರಿ. ಚಾಸಾ-1 ರವರ ಮನೆಯ ಬಳಿ ಮು.ಮಾ-1 ಮತ್ತು 2 ರಂತೆ ದೊಣ್ಣೆಗಳನ್ನು ದಾಸ್ತಾನು ಮಾಡಿರುತ್ತಾರೆಂದರೆ ಸಾಕ್ಷಿ ಅಲ್ಲಿ ಇಲ್ಲ, ಚಾಸಾ-1 ರವರ ಮನೆಯ ಪಕ್ಕದ ನಿವೇಶನದಲ್ಲಿ ಬ್ಯಾರನ್ ಗಾಗಿ ಸೌದೆಯನ್ನು ದಾಸ್ತಾನು ಮಾಡಿರುತ್ತಾರೆ ಎಂದು ಹೇಳುತ್ತಾರೆ. ಚಾಸಾ-1 ರವರು ಬ್ಯಾರನ್ ಗಾಗಿ ಸೌದೆಯನ್ನು ದಾಸ್ತಾನು ಮಾಡಿದ ಜಾಗದಿಂದ ಮು.ಮಾ-1 ಮತ್ತು 2 ನ್ನು ತಂದು ಕೊಟ್ಟಿರುತ್ತಾರೆಂದರೆ ಸಾಕ್ಷಿ ಅವರು ನಾವು ಬರಬೇಕಾದರೆ ತಂದು ಕೊಟ್ಟಿಲ್ಲ, ಪೊಲೀಸರು ತಂದು ಕೊಟ್ಟಿರುವುದಾಗಿ ಹೇಳಿದರು ಎಂದು ಹೇಳುತ್ತಾರೆ. ಚಾಸಾ-1 ರವರು ಮು.ಮಾ-1 ಮತ್ತು 2 ನ್ನು ಪೊಲೀಸರಿಗೆ ನೀಡಿದ್ದನ್ನು ನೀವು ಖುದ್ದಾಗಿ ನೋಡಿಲ್ಲ ಎಂದರೆ ಸರಿ. ನಿಪಿ-2 ಕ್ಕೆ ಘಟನೆ ನಡೆಯಿತು ಎಂದು ಹೇಳುವ ಸ್ಥಳದಲ್ಲೇ ಸಹಿ ಮಾಡಿರುತ್ತೇನೆಂದು ಸುಳ್ಳು ಹೇಳುತ್ತಿದ್ದು, ಚಾಸಾ-2 ರವರೊಂದಿಗೆ ಠಾಣೆಯಲ್ಲಿ ಸಹಿ ಮಾಡಿರುತ್ತೀರಾ ಎಂದರೆ ಸರಿಯಲ್ಲ. ಮು,ಮಾ-1 ಮತ್ತು 2 ನ್ನು ಇಂದೇ ಮೊದಲ ಬಾರಿಗೆ ನ್ಯಾಯಾಲಯದ ಮುಂದೆ ನೋಡುತ್ತಿದ್ದು,

ಘಟನೆ ನಡೆಯಿತು ಎಂದು ಹೇಳುವ ಸ್ಥಳದಲ್ಲಿ ಪೊಲೀಸರು ನಿಮಗೆ ಮು,ಮಾ-1 ಮತ್ತು 2 ನ್ನು ತೋರಿಸಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು.